ದುಮ್ಮೇನಹಳ್ಳಿ 33. ಎಸ್. ಕಲ್ಲೇನಹಳ್ಳಿ 34. ಹೊನ್ನಕುಮಾರನಹಳ್ಳಿ 35. ಹಿರಿಯೂರು 36. ಹೆಗ್ಗೇಡಿಹಳ್ಳಿ 37. ಮರಿಯಾನಗರ 38. ಹೆತ್ತಗೊಡನಹಳ್ಳಿ 39. ಹೆತ್ತೂರು 40. ನ್ಯಾಮನಹಳ್ಳಿ 41. ಗುಂಡನಬೆಳ್ಳೂರು 42. ಕುಂದೂರು 43. ಡಿಂಕಾ ಡಿ. ಹೊನ್ನೇನಹಳ್ಳಿ 44. ಡಿ.ಎಂ. ಕುರ್ಕೆ 45. ಟಿ. ಕೋಡಿಹಳ್ಳಿ 46. ಮಾಗರಹಳ್ಳಿ 47. ರಾಮನಾಥಪುರ 48. ದೊಡ್ಡಮಗ್ಗೆ 49. ದಾಸರಕೊಪ್ಪಲು 50. ಚಿಕ್ಕಗೊಂಡಗೋಳ ಕೊಪ್ಪಲು 51. ಚಿಕ್ಕಹೊನ್ನೇನಹಳ್ಳಿ 52. ಕಾರ್ ಕೆರೆ 53. ಶಾಂತಿಗ್ರಾಮ 54. ಕೌಶಿಕ (ಚನ್ನಬಸವನಹಳ್ಳಿ) 55. ದೊಡ್ಡಕೊಂಡಗುಳ ಮತ್ತು 56.ಉದ್ದರಹಳ್ಳಿ.

ಬೇಲೂರು ಪ್ರಥಮದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ

2596 (2927) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೇಲೂರು ಪ್ರಥಮದರ್ಜೆ ಕಾಲೇಜಿನಲ್ಲಿ ವಾಣಿಜ್ಯ (ಕಾಮರ್ಸ್) ಉಪನ್ಯಾಸಕರು ಮತ್ತು ಆಂಗ್ಲ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಹೌದು.

ಆ) ಈ ಕೊರತೆಯನ್ನು ಸಂಯುಕ್ತ ಪದವಿ ಕಾಲೇಜುಗಳನ್ನು ಬೇರ್ಪಡಿಸಿರುವ ಹಿನ್ನಲೆಯಲ್ಲಿ, ಹೆಚ್ಚುವರಿಯಾದಂತಹ ಉಪನ್ಯಾಸಕರುಗಳನ್ನು ಅವರ ಹುದ್ದೆ ಸಮೇತ ವರ್ಗಾಯಿಸುವ, ಅರೆಕಾಲಿಕ ಉಪನ್ಯಾಸಕರುಗಳನ್ನು ನಿಯೋಜಿಸುವ ಮತ್ತು ಬ್ಯಾಕ್‌ಲಾಗ್ ಉಪನ್ಯಾಸಕರ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮೂಲಕ ಭರ್ತಿ ಮಾಡಿ ಕೊರತೆ ನೀಗಿಸಲು ಕ್ರಮಕೈಗೊಳ್ಳಲಾಗುವುದು.

ಬೇಲೂರು ತಾಲ್ಲೂಕಿನಲ್ಲಿ ಗ್ರಂಥಾಲಯ ತೆರೆಯುವುದು

2599 (2928) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) :— ಮಾನ್ಯ ವಯಸ್ಕರ ಶಿಕ್ಷಣ, ಗಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೇಲೂರು ತಾಲ್ಲೂಕಿನಲ್ಲಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಎಷ್ಟು ಗ್ರಂಥಾಲಯಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದೆ;

ಅ) ಹಾಲಿ ಮಂಜೂರಾದ ಗ್ರಂಥಾಲಯಗಳ ಸಂಖ್ಯೆ ಎಷ್ಟು; ಯಾವ ಯಾವ ಸ್ಥಳಗಳಲ್ಲಿ ಕಾರ್ಯ ಪ್ರಾರಂಭಿಸಲಾಗಿದೆ.

ಇ) ಕಟ್ಟಡವಿಲ್ಲದ ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :—

ಅ) ಬೇಲೂರು ತಾಲ್ಲೂಕಿನಲ್ಲಿ ಗ್ರಾಮಪಂಚಾಯಿತಿ ಮಟ್ಟದಲ್ಲಿ 8 ಗ್ರಂಥಾಲಯಗಳನ್ನು ತೆರೆಯಲಾಗಿದೆ.

ಆ) 8 ಗ್ರಂಥಾಲಯಗಳು ಮಂಜೂರಾಗಿವೆ. ಅವುಗಳ ವಿವರ ಕೆಳಕಂಡಂತಿವೆ

1) ಆಗರೆ	2) ಗೋಣಿಸೋಮನಹಳ್ಳಿ
3) ಹರೇಯಳ್ಳ	4) ಹಳೇಬೀಡು
5) ಅಡಿಗೂರು	6) ರಾಜಸಿರಿಯೂರು
7) ಬಿನ್ನೋಡು	

ಇ) 1 ಶಾಖಾ ಗ್ರಂಥಾಲಯ ಮತ್ತು 7 ಗ್ರಾಮಪಂಚಾಯಿತಿ ಗಂಥಾಲಯಗಳಿಗೆ ಕಟ್ಟಡಗಳಿರುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಗ್ರಂಥಾಲಯಗಳ ಪ್ರಾರಂಭ

2598 (3140) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) :— ಮಾನ್ಯ ವಯಸ್ಕರ ಶಿಕ್ಷಣ, ಗಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ಈಗ ಎಷ್ಟು ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ; (ವಿಧಾನಸಭಾಕ್ಷೇತ್ರವಾರು ಮಾಹಿತಿ ಒದಗಿಸುವುದು)

ಆ) ಜಿಲ್ಲೆಯಲ್ಲಿ ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸುವ ಸಲುವಾಗಿ ಎಷ್ಟು ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿವೆ; (ಗ್ರಾಮವಾರು ಹಾಗೂ ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

ಇ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ಹೊಸದಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು ಹಾಗೂ ಇದಕ್ಕೆ ವೆಚ್ಚ ಮಾಡಲಾಗುವ ಹಣವೆಷ್ಟು;

ಈ) ಹುಲಸೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು?